RNU AIR DHARWAD

APRIL 26,2025
ALL INDIA RADIO- DHARWAD
PRADESH SAMACHARA (KANNADA) 12PM

ಆಕಾಶವಾಣಿ

ಪ್ರದೇಶ ಸಮಾಚಾರ

ಇಂದು, ದೇಶದ 47 ಕೇಂದ್ರಗಳಲ್ಲಿ 15 ನೇ ಆವೃತ್ತಿಯ, ರಾಷ್ಟ್ರೀಯ ಉದ್ಯೋಗ ಮೇಳ ಆಯೋಜಿತವಾಯಿತು. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ರೋಜಗಾರ ಮೇಳಕ್ಕೆ ಚಾಲನೆ ನೀಡಿದರು. ಹುಬ್ಬಳ್ಳಿಯ ಕೆ.ಎಲ್.ಇ ತಾಂತ್ರಿಕ ವಿಶ್ವವಿದ್ಯಾಲಯದ, ಬಿ.ವಿ ಭೂಮರೆಡ್ಡಿ ಅಭಿಯಾಂತ್ರಿಕ ಮಹಾವಿದ್ಯಾಲಯದಲ್ಲಿ ಆಯೋಜಿತ ಕಾರ್ಯಕ್ರಮದಲ್ಲಿ ಭಾಗವಹಿಸಿದ, ಕೇಂದ್ರದ ಯುವ ವ್ಯವಹಾರ ಮತ್ತು ಕ್ರೀಡಾ ಖಾತೆ ರಾಜ್ಯ ಸಚಿವರಾದ, ರಕ್ಷಾ ಖಡ್ಸೆ, 50 ಜನರಿಗೆ ನೇಮಕಾತಿ ಆದೇಶ ಪತ್ರ ನೀಡಿದರು.

<><><>

ಬೆಂಗಳೂರು ಎನ್.ಎ.ಸಿ.ಐ.ಎ ಝೋನಲ್ ಕ್ಯಾಂಪಸ್ ನಲ್ಲಿ ಆಯೋಜಿಸಲಾದ ರಾಷ್ಟ್ರೀಯ ರೋಜಗಾರ ಮೇಳ ಕಾರ್ಯಕ್ರಮದಲ್ಲಿ, ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆ ಸಚಿವ ಡಾಕ್ಟರ ವಿರೇಂದ್ರ ಕುಮಾರ್ ಉದ್ಯೋಗ ನಿಯುಕ್ತಿ ಪತ್ರಗಳನ್ನು ವಿತರಿಸಿದರು.

<><><>

ರಾಜ್ಯದ ಜನರಿಗೆ, ಆಸ್ತಿಯ ಡಿಜಿಟಲ್ ಭೂ ದಾಖಲೆ ಒದಗಿಸಲು, ಇದೇ 29ರಂದು ನೂತನ ಭೂ ಸುರಕ್ಷಾ ಯೋಜನೆ ಜಾರಿಗೊಳಿಸುವುದಾಗಿ, ಕಂದಾಯ ಖಾತೆ ಸಚಿವ ಕೃ ್ಣ ಬೈರೇಗೌಡ ತಿಳಿಸಿದ್ದಾರೆ. ಬೆಂಗಳೂರಿನ ವಿಕಾಸಸೌಧದಲ್ಲಿ ಕಂದಾಯ ಇಲಾಖೆಯ, ಮಾಸಿಕ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಸಚಿವರು, ರಾಜ್ಯ ಸರ್ಕಾರಕ್ಕೆ ಎರಡು ವರ್ಷಗಳು ತುಂಬುತ್ತಿವೆ. ಮೇ 16 ರಂದು, ಮಂಗಳೂರಿನಲ್ಲಿ 10 ಸಾವಿರ ಜನರಿಗೆ ಭೂ ಮಾಲಿಕತ್ವದ ದರ್ಖಾಸ್ತು ಪೋಡಿ ವಿತರಿಸಲಾಗುವುದು. ವಿಜಯನಗರ ಜಿಲ್ಲೆ, ಹೊಸಪೇಟೆಯಲ್ಲಿ ಒಂದು ಲಕ್ಷ ಫಲಾನುಭವಿಗಳಿಗೆ, ಹಕ್ಕುಪತ್ರ ವಿತರಿಸಲಾಗುವುದು ಎಂದರು.

<><><>

ಧ್ವನಿ: ಕೃಷ್ಣ ಬೈರೇಗೌಡ 37 ಸೆಕೆಂದುಗಳು

<><><>

ಮಹಾತ್ಮ ಗಾಂಧಿ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಅಡಿ, ಕೂಲಿ ಕಾರ್ಮಿಕರ ವಲಸೆ ತಡೆಗಟ್ಟಿ, ಅವರಿದ್ದ ಸ್ಥಳದಲ್ಲಿ ಕೆಲಸ ಒದಗಿಸಿ, ಮಣ್ಣು ಮತ್ತು ನೀರಿನ ಸಂರಕ್ಷಣೆಗೂ ಆದ್ಯತೆ ನೀಡಲಾಗಿದೆ ಎಂದು, ಗದಗ ಜಿಲ್ಲಾ ಪಂಚಾಯ್ತಿ ಉಪ ಕಾರ್ಯದರ್ಶಿ ಸಿ.ಆರ್. ಮುಂಡರಿಗೆ ಹೇಳಿದ್ದಾರೆ. ಗದಗ ತಾಲೂಕು, ಕುರ್ತಕೋಟಿ ಗ್ರಾಮದ, ಕಂದಕ ಬದು ನಿರ್ಮಾಣ ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿ, ಪ್ರಗತಿ ಪರಿಶೀಲಿಸಿದರು. ಜಿಲ್ಲೆಯಾದ್ಯಂತ, ಕಂದಕ ಬದು ನಿರ್ಮಾಣ ಕಾಮಗಾರಿಯಲ್ಲಿ, ನಿತ್ಯ 70 ಸಾವಿರ ಕೂಲಿ ಕಾರ್ಮಿಕರು ಭಾಗವಹಿಸಿ, ನರೇಗಾ ಯೋಜನೆಯ ಸದುಪಯೋಗ ಪಡೆದುಕೊಳ್ಳುತ್ತಿದ್ದಾರೆ ಎಂದರು.

<><><>

ಖ್ಯಾತಿವೆತ್ತ ಬಾಹ್ಯಾಕಾಶ ವಿಜ್ಞಾನಿ, ಪದ್ಮವಿಭೂಷಣ ಕೆ. ಕಸ್ತೂರಿರಂಗನ್, ಬೆಂಗಳೂರಿನ ತಮ್ಮ ಸ್ವಗೃಹದಲ್ಲಿ, ನಿಧನರಾಗಿದ್ದಾರೆ. ಅವರಿಗೆ 84 ವರ್ಷ ವಯಸ್ಸಾಗಿತ್ತು. ಗಣ್ಯರು ಕಂಬನಿ ಮಿಡಿದಿದ್ದಾರೆ. ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ಮುಖ್ಯಸ್ಥರಾಗಿ, ಕರ್ನಾಟಕ ಜ್ಞಾನ ಆಯೋಗದ ಅಧ್ಯಕ್ಷರಾಗಿ, ಯೋಜನಾ ಆಯೋಗದ ಸದಸ್ಯರಾಗಿ, ರಾಜ್ಯಸಭೆ ನಾಮನಿರ್ದೇಶಿತ ಸದಸ್ಯರಾಗಿ ಹಾಗೂ ಹಲವು ವಿಶ್ವವಿದ್ಯಾಲಯಗಳ ಉಪ ಕುಲಪತಿಯಾಗಿ, ಗಣನೀಯ ಸೇವೆ ಸಲ್ಲಿಸಿದ್ದಾರೆ. ಪಶ್ಚಿಮಘಟ್ಟದ ಸಂರಕ್ಷಣೆ ಕುರಿತ, ಕಸ್ತೂರಿ ರಂಗನ್ ವರದಿಯಿಂದಾಗಿ, ಅವರು ಜನಜನಿತರಾಗಿದ್ದರು. ಬೆಂಗಳೂರಿನ, ರಾಮನ್ ಸಂಶೋಧನಾ ಸಂಸ್ಥೆಯ ಆವರಣದಲ್ಲಿ, ನಾಳೆ ಭಾನುವಾರ ಬೆಳಗ್ಗೆ 10 ರಿಂದ 12ರ ವರೆಗೆ, ಪಾರ್ಥಿವ ಶರೀರದ ಅಂತಿಮ ದರ್ಶನಕ್ಕೆ, ವ್ಯವಸ್ಥೆ ಮಾಡಲಾಗಿದೆ.

<><><>

ಉಪ ಲೋಕಾಯುಕ್ತ, ನ್ಯಾಯಮೂರ್ತಿ ಬಿ.ವೀರಪ್ಪ ಅವರಿಗೆ, ದಾವಣಗೆರೆಯಲ್ಲಿ ಎರಡನೇ ದಿನ, 460ಕ್ಕೂ ಹೆಚ್ಚು ದೂರುಗಳು, ಸಾರ್ವಜನಿಕರಿಂದ ಸಲ್ಲಿಕೆಯಾಗಿವೆ. 200ಕ್ಕೂ ಹೆಚ್ಚು ದೂರುಗಳನ್ನು ವಿಚಾರಣೆಗೆ ಕೈಗೆತ್ತಿಕೊಂಡ, ನ್ಯಾಯಮೂರ್ತಿಗಳು, 100 ಪ್ರಕರಣಗಳಿಗೆ ಸ್ಥಳದಲ್ಲೇ ಪರಿಹಾರ ಒದಗಿಸಿದರು. ದೂರುಗಳನ್ನು ಸ್ವೀಕರಿಸಲು, 6 ಘಟಕಗಳನ್ನು ತೆರೆಯಲಾಗಿದ್ದು, ಹಲವು ಪ್ರಕರಣಗಳ ವಿಚಾರಣೆ ಮುಂದುವರೆದಿದೆ.

<><><>

ಕಾಲು, ಬಾಯಿ ಜ್ವರ ಬಾಧೆಯಿಂದ, ರಾಸುಗಳ ಆರೋಗ್ಯ ರಕ್ಷಣೆಗಾಗಿ, ನಾಲ್ಕು ತಿಂಗಳಿಗಿಂತ ಮೇಲ್ಪಟ್ಟ, ಎಲ್ಲ ಜಾನುವಾರುಗಳಿಗೆ, ಲಸಿಕೆ ಹಾಕಿಸುವಂತೆ, ಕೃಷಿ ಖಾತೆ ಸಚಿವ ಎನ್. ಚಲುವರಾಯಸ್ವಾಮಿ, ರೈತರಲ್ಲಿ ಮನವಿ ಮಾಡಿದ್ದಾರೆ. ಮಂಡ್ಯ ಜಿಲ್ಲೆ, ನಾಗಮಂಗಲದಲ್ಲಿ, ಜಾನುವಾರುಗಳಿಗೆ ಲಸಿಕೆ ನೀಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ಮಾತನಾಡಿದರು. ಎತ್ತು, ಹೋರಿ, ಹಸು, ಎಮ್ಮೆ ಮತ್ತು ಹಂದಿಗಳನ್ನು ಸಾಕಿರುವ ರೈತರು, ಹೈನುಗಾರರು, ಸಮೀಪದ ಪಶು ವೈದ್ಯಕೀಯ ಸೇವಾ ಕೇಂದ್ರಕ್ಕೆ ಭೇಟಿ ನೀಡಿ, ತಕ್ಷಣವೇ ತಮ್ಮ ಜಾನುವಾರುಗಳಿಗೆ ಲಸಿಕೆ ಹಾಕಿಸಿಕೊಳ್ಳುವಂತೆ, ಸಚಿವರು ಕೋರಿದರು.

<><><>

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.

<><><>